ಮತ್ತು ಮೊಕದ್ದಮೆಗಳನ್ನು ಹೂಡಿ ಆ ಮೊಕದ್ದಮೆಗಳಿಂದ ಶಿಕ್ಷೆಯಾದವರ ಸಂಖ್ಯೆ ಎಷ್ಟು ಎಂದು ನಾನು ಕೇಳಿದ್ದಕ್ಕೆ ತಾವು ತಮ್ಮ ಉತ್ತರದಲ್ಲಿ ಯಾವುದೂ ಇಲ್ಲ ಎನ್ನುವ ಮಾತನ್ನು ಹೇಳಿದ್ದೀರಿ. ಇಂತಹ ಪರಿಸ್ಥಿತಿ ಬರಬೇಕಾದರೆ ಇದು ಕಾನೂನಿನಿಂದ ತಪ್ಪಿಸಿಕೊಳ್ಳತಕ್ಕಂಥ ಲೂಪ್ ಹೋಲ್ಸ್ ಏನಾದರೂ ಇವೆಯೇ? ಅಥವಾ ನಿಮ್ಮ ಇಲಾಖೆಯ ಸಿಬ್ಬಂದಿ ವರ್ಗದವರು ಸರಿಯಾದ ರೀತಿಯಲ್ಲಿ ಇನ್‌ವೆಸ್ಟಿಗೇಶನ್ ಮಾಡಲಿಲ್ಲವೇ? ಹಾಗೂ ನ್ಯಾಯಾಲಯದ ಮುಂದೆ ಹೋಗಲಿಲ್ಲವೇ? ಅಥವಾ ಈ ಇನ್‌ವೆಸ್ಟಿಗೇಶನ್ ಮಾಡುವುದಕ್ಕೆ ನಿಮ್ಮ ಇಲಾಖೆಯಲ್ಲಿ ನನಗೆ ತಿಳಿದ ಮಟ್ಟಿಗೆ ಸರಿಯಾದ ಸಿಬ್ಬಂದಿ ಇಲ್ಲ ಎಂದು ಕಂಡು ಬಂದಿದೆ. ಆದ್ದರಿಂದ ತಾವು ಈ ಇಲಾಖೆಗೆ ಹೆಚ್ಚು ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಎನ್ನುವುದಕ್ಕೆ ನನಗೆ ಉತ್ತರ ಬೇಕು.

ಶ್ರೀ ಕೆ.ಹೆಚ್. ರಂಗನಾಥ್.— ತಮಗೆ ಗೊತ್ತಿದ್ದ ಹಾಗೆ ಕ್ರಿಮಿನಲ್ ಕೇಸ್ ಸಾಬೀತಾಗ ಬೇಕಾಗಿದೆ. ಸಾಬೀತಾಗದಿದ್ದರೆ ಕೋರ್ಟ್‌ನಲ್ಲಿ ಕೇಸ್ ಅಕ್ವಿಟ್ ಆಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರ ಊಹೆ ಏನಿದೆ ಅದು ಸಕಾರಣವಾದ ಊಹೆಯಲ್ಲ.

ಶ್ರೀ ಸಿ. ಬೈರೇಗೌಡ.— ಇನ್ನೂ ಒಂದು ಪ್ರಶ್ನೆ ಇದೆ ಈ ಇಲಾಖೆಯಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲವೆಂದು ಗೊತ್ತಾಗಿದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ಇಲಾಖೆಗೆ ಕೆಲವು ಸಲಕರಣೆಗಳು ಸಹಾ ಬೇಕಾಗುತ್ತವೆ, ಆ ಕಾರಣದಿಂದ ನಿಮ್ಮ ಕೇಸ್‌ಗಳು ನ್ಯಾಯಾಲಯದ ಮುಂದೆ ಹೋದಾಗ ಆ ನ್ಯಾಯಾಲಯದಲ್ಲಿ ನಿಲ್ಲುವುದಿಲ್ಲವೆಂದು ನನ್ನ ಭಾವನೆ, ಅದು ಸರಿಯೋ ತಪ್ಪೋ ಎಂದು ತಿಳಿಸುತ್ತೀರಾ? ಸಿಬ್ಬಂದಿ ಕೊರತೆಯನ್ನು ತಪ್ಪಿಸತಕ್ಕ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಕೆ.ಹೆಚ್. ರಂಗನಾಥ್.— ಈ ಕಾನೂನುಗಳೆಲ್ಲಾ ಹೊಸದು ತಮಗೆ ತಿಳಿದ ಹಾಗೆ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಕಾಯಿದೆ ೧೯೭೪ ರಿಂದ ಜಾರಿಯಲ್ಲಿದೆ. ತದ ನಂತರ ಪರಿಸರದ ಸಂರಕ್ಷಣೆ ಕಾಯಿದೆ ಜಾರಿಯಲ್ಲಿ ಬಂದಿದ್ದು ೧೯೮೬ರಲ್ಲಿ. ಈ ಎಲ್ಲಾ ಕಾನೂನುಗಳೆಲ್ಲಾ ಹೊಸದಾಗಿರುವುದರಿಂದ ಕೆಲವು ತಪ್ಪುಗಳು ಆಗುತ್ತಿರಬಹುದು. ಆದರೆ ಮಾನ್ಯ ಸದಸ್ಯರ ಅಭಿಮತದ ಪ್ರಕಾರ ಈ ಇಲಾಖೆಯಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲವೆಂದು ಏನು ಹೇಳಿದ್ದಾರೆ, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ.— ಮತ್ತೆ ಬೆಂಗಳೂರಿನ ಆನಂದರಾವ್ ಸರ್ಕಲ್‌ನಲ್ಲಿ ಮಾತ್ರ ಗಾಳಿ ಮಾಲಿನ್ಯ ಹೆಚ್ಚಾಗಿರುವುದೆಂದು ಹೇಳಿದ್ದೀರಿ. ಆದರೆ ಕಾರ್ಪೊರೇಷನ್ ಆಫೀಸ್ ಎದುರುಗಡೆ ಶಿವಾಜಿನಗರ ಬಸ್‌ಸ್ಟಾಂಡ್ ಹತ್ತಿರ, ಸುಭಾಷ್ ನಗರ ಬಸ್ ಸ್ಟಾಂಡ್ ಹತ್ತಿರ ದಿನದಲ್ಲಿ ಕೆಲವು ಗಂಟೆಗಳ ಕಾಲ ಅಲ್ಲಿ ಹೋಗಬೇಕಾದರೆ ಮೂಗು ಮುಚ್ಚಿಕೊಂಡು ಹೋಗಬೇಕಾಗುತ್ತದೆ. ಇಂಥಾ ಪರಿಸ್ಥಿತಿ ನಗರದಲ್ಲಿ ಇರುವಾಗ ಇದು ಟಾಲರಬಲ್ ಲಿಮಿಟ್ಸ್‌ನಲ್ಲಿ ಇದೆಯೆಂದು ಉತ್ತರ ಬಂದಿದೆ. ಇದನ್ನು ಪುನರ್ ಪರಿಶೀಲನೆ ಮಾಡಿ ಯಾವ ಯಾವ ವಾಹನಗಳಿಂದ ಗಾಳಿ ಮಾಲಿನ್ಯವಾಗುತ್ತದೋ ಅಂಥಾ ವಾಹನಗಳ ಮಾಲೀಕರ ಮೇಲೆ ಸರ್ಕಾರದವರು ಕ್ರಮ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಕೆ.ಹೆಚ್. ರಂಗನಾಥ್.— ಈ ಸಲಹೆಯನ್ನು ಪರಿಶೀಲನೆ ಮಾಡಲಾಗುವುದು.

ಅಧ್ಯಕ್ಷರು.— ಶ್ರೀ ಕರಿಯಣ್ಣನವರು.

(ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ)

ಅಧ್ಯಕ್ಷರು.— ಶ್ರೀ ಡಿ.ಎ. ಚಿನ್ನಪ್ಪನವರು.

ಚುಕ್ಕೆ ಪ್ರಶ್ನೆ ಸಂಖ್ಯೆ: ೨೩೧ (೭೩೦)

ಕೋಟೆ ಹಾಗೂ ನಗರ ಸಭೆ ಕಟ್ಟಡದ ಜೀರ್ಣೋದ್ಧಾರ

೭೩೦. ಶ್ರೀ ಡಿ.ಎ. ಚಿನ್ನಪ್ಪ (ಮಡಿಕೇರಿ).— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೇ.—

ಅ) ಮಡಿಕೇರಿಯಲ್ಲಿ ಕಂದಾಯ ಕಚೇರಿಗಳು, ತಹಶೀಲ್ದಾರ್ ಕಚೇರಿ ಕಟ್ಟಡಗಳನ್ನು ಜೀರ್ಣೋದ್ಧಾರ ಮಾಡಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಜಿಲ್ಲಾಧಿಕಾರಿಗಳ ಕಚೇರಿ ಮತ್ತು ಉಪ ವಿಭಾಗಾಧಿಕಾರಿಗಳ ಕಚೇರಿಯ ಕಟ್ಟಡಗಳಿಗೆ ಖರ್ಚು ಮಾಡಲಾದ ಹಣವೆಷ್ಟು;

ಇ) ಟೆಂಡರ್ಸ್ ಕರೆಯಲಾಗಿತ್ತೇ, ಇಲ್ಲದಿದ್ದಲ್ಲಿ ಯಾವ ಆಧಾರದ ಮೇಲೆ ಖರ್ಚು ಮಾಡಲಾಯಿತು?

ಶ್ರೀ ಕೆ.ಹೆಚ್. ಪಾಟೀಲ್ (ಕಂದಾಯ ಸಚಿವರು)—

ಅ) ಹೌದು. ಈ ಕಚೇರಿಗಳ ಕಟ್ಟಡಗಳ ಜೀರ್ಣೋದ್ಧಾರ ಕೆಲಸವನ್ನು ತೆಗೆದುಕೊಳ್ಳಲಾಗಿದೆ.

ಆ) ೧೯೮೯-೯೦ನೇ ಇಸವಿಯಲ್ಲಿ ಈ ರೀತಿ ಖರ್ಚು ಮಾಡಲಾಗಿದೆ.—

೧ ಜಿಲ್ಲಾಧಿಕಾರಿಗಳ ಕಚೇರಿ — ರೂ. ೩,೯೦,೦೦೦-೦೦

೨ ಉಪ ವಿಭಾಗಾಧಿಕಾರಿಗಳ ಕಚೇರಿ — ರೂ. ೧,೦೦,೦೦೦-೦೦

ಇ) ಕೆಲವು ವಸ್ತುಗಳನ್ನು ಸಾರ್ವಜನಿಕ ಉದ್ಯಮ ಸಂಸ್ಥೆಗಳಿಂದ ಖರೀದಿಸಲಾಯಿತು, ಮತ್ತೆ ಕೆಲವು ವಸ್ತುಗಳನ್ನು ಟೆಂಡರ್ಸ್ ಕರೆದು ಅದರಂತೆ ನಿಯಮಾವಳಿಗನುಸಾರವಾಗಿ ಖರೀದಿಸಲಾಯಿತು.

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಕೊಟ್ಟಿರುವ ಉತ್ತರ ಸರಿಯಲ್ಲವೆಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ಕೊಡಗು ಜಿಲ್ಲೆಯ ಡಿ.ಸಿ ಆಫೀಸ್ ಹಾಗೂ ಎ.ಸಿ. ಆಫೀಸ್ ಮತ್ತು ತಹಶೀಲ್ದಾರ್ ಕಛೇರಿಗಳ ರೆನೋವೇಷನ್ ಮಾಡುವುದಕ್ಕೆ ಸರ್ಕಾರ ಎಷ್ಟು ಖರ್ಚು ಮಾಡಿದೆಯೆಂದು ನಾನು ಕೇಳಿದ್ದೇನೆ. ಆನಂತರ, ಅಲ್ಲಿದ್ದಂಥ ಫರ್ನಿಚರ್ಸ್‌ನ್ನು ಹರಾಜು ಹಾಕಿರುವುದರಿಂದ ಸರ್ಕಾರಕ್ಕೆ ಎಷ್ಟು ಹಣ ಬಂದಿದೆ ? ಆ ಹಣವನ್ನು ಯಾವ ರೀತಿ ಉಪಯೋಗಿಸಲಾಗಿದೆ ? ಅದೂ ಅಲ್ಲದೆ ಕೆಲಸಗಳನ್ನು ಮಾಡಿಸುವುದಕ್ಕೆ ಟೆಂಡರ್‌ನ್ನು ಕರೆಯದೆ ಮಾಡಿರುವುದು ಸಮರ್ಪಕವಾಗಿರುವುದಿಲ್ಲ. ಆದ್ದರಿಂದ ಇದರ ಬಗ್ಗೆ ತಾವು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ. ಹೆಚ್. ಪಾಟೀಲ್,—ಕೊಡಗು ಜಿಲ್ಲೆಯ ಮಡಿಕೇರಿ ಡೆಪ್ಯೂಟಿ ಕಮೀಷನರ್‌ರವರ ಆಫೀಸ್‌ನ ರೆನೋವೇಷನ್‌ಗೆ ೩ ಲಕ್ಷದ ೯೦ ಸಾವಿರ ರೂಪಾಯಿಗಳನ್ನು ಅಲ್ಲಿನ ಎ.ಸಿ. ಯವರ ಆಫೀಸ್‌ಗೆ ಒಂದು ಲಕ್ಷ ರೂಪಾಯಿಗಳನ್ನು ಹಾಗೂ ತಾಲ್ಲೂಕು ಆಫೀಸ್‌ಗೆ ೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. The expenditure to these works has been incurred by placing indents with Government Undertakings, Mysore Lamp Works Limited, Mysore Lac and Paints Limited. Janatha Bazar, Cardamom Co-operative Society from the Rate Contract and the Karnataka Small Industries Marketing Federation for the remaining items quotations were called for and after following the prescribed procedure, lowest quotations were accepted. ಆಮೇಲೆ, ಅಲ್ಲಿದ್ದ ಫರ್ನಿಚರ್ಸ್ ಮಾರಾಟ ಮಾಡಿರುವ ಬಗ್ಗೆ ಬಂದ ಹಣದ ಬಗ್ಗೆ ಕೇಳಿರುವ ಪ್ರಶ್ನೆ ಬೇರೆ ಆಗುವುದರಿಂದ ಆ ಬಗ್ಗೆ ಬೇರೆ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ತರಿಸಿಕೊಡುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ.—ತಾಲ್ಲೂಕು ಆಫೀಸ್‌ಗೆ ೨ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ತಾಲ್ಲೂಕು ಆಫೀಸ್‌ಗೆ ಖರ್ಚು ಮಾಡಿರುವುದು ೧ ಲಕ್ಷ ರೂಪಾಯಿಗಳು ಮಾತ್ರ. ಆ ವಿಷಯವನ್ನು ತಹಶೀಲ್ದಾರ್‌ರವರೇ ಹೇಳಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್.—ನನಗೆ ಬಂದ ಮಾಹಿತಿ ಪ್ರಕಾರ ೨ ಲಕ್ಷ ರೂಪಾಯಿ ಖರ್ಚಾಗಿದೆಯೆಂದು ಹೇಳಲಾಗಿದೆ. ಅದನ್ನು ಎನ್‌ಕ್ವೈರಿ ಮಾಡಿಸುತ್ತೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಇದರಲ್ಲಿ ಯಾರಾದರು ತಪ್ಪು ಮಾಹಿತಿ ಕೊಟ್ಟಿದ್ದರೆ ಹಾಗೂ ಯಾರಾದರೂ ತಪ್ಪು ಮಾಡಿದ್ದರೆ ಅವರನ್ನು ಶಿಕ್ಷೆಗೆ ಗುರಿಪಡಿಸುತ್ತೇನೆ.